ಶ್ರೀ ಪಂಪಾಪತಿ.—ಮಾನ್ಯ ಅಧ್ಯಕ್ಷರೆ ತಮ್ಮ ಮುಖಾಲಕ ಮಾನ್ಯ ಸಚಿವರಲ್ಲಿ ಒಂದು ವಿಷಯವನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ದಾವಣಗೆರೆ ಯೋಜನಾ ಪ್ರಾಧಿಕಾರದವರು ಯಾವಾಗಿನಿಂದ ಆ ಕೆಲಸವನ್ನು ಆರಂಭ ಮಾಡಿದರು ? ಈ ಯೋಜನಾ ಪ್ರಾಧಿಕಾರ ದಾವಣಗೆರೆ-ಹರಿಹರ ಮಧ್ಯೆ ಇರತಕ್ಕ ೬೮ ಹಳ್ಳಿಗಳನ್ನು ಒಳಗೊಂಡಿರತಕ್ಕದೆಂದು ನಾನು ತಿಳಿದುಕೊಂಡಿದ್ದೇನೆ. ಅವರು ಇದರ ಬಗ್ಗೆ ಸ್ಥೂಲವಾದ ನೀಲಿ ನಕಾಶೆಯನ್ನು ತಯಾರು ಮಾಡಿದ್ದಾರೆಯೆ ? ತಯಾರು ಮಾಡಿದ್ದರೆ ಅಲ್ಲಿ ಸಾರ್ವಜನಿಕರ ಅನುಕೂಲಕ್ಕಾಗಿ ಶಾಲೆ, ಆಟದ ಮೈದಾನ, ಮಾರ್ಕೆಟ್, ವೈದ್ಯಕೀಯ ಸೌಲಭ್ಯಕ್ಕಾಗಿ ಸ್ಥಳಗಳನ್ನು ಕಾದಿರಿಸಲಾಗಿದೆಯೆ ? ಕಾದಿರಿಸಿದ್ದರೆ ಅದಕ್ಕಾಗಿ ಏನಾದರೂ ಗುರುತು ಮಾಡಿದ್ದಾರೆಯೆ ?

ಶ್ರೀ ಎ. ಲಕ್ಷ್ಮೀಸಾಗರ್.—ಕಾದಿರಿಸಬೇಕೆಂದು ಕಾನೂನಿನಲ್ಲಿದೆ. ಅದನ್ನು ನಿರಾಕರಿಸಿ ಏನಾದರೂ ವ್ಯವಹಾರಗಳು ನಡೆದಿದ್ದರೆ ಅದನ್ನು ನನಗೆ ನೇರವಾಗಿ ತಿಳಿಸಿದರೆ ಅದರ ಬಗ್ಗೆ ವಿವರಗಳನ್ನು ತರಿಸಿಕೊಂಡು ಮುಂದಿನ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಪಂಪಾಪತಿ.— ಈ ಕೆಲಸ ಪ್ರಾರಂಭವಾಗಿ ಎಷ್ಟು ವರ್ಷಗಳಾಗಿವೆ ? ಮಾಸ್ಟರ್ ಪ್ಲಾನ್ ನೀಲಿ ನಕ್ಷೆಯನ್ನು ಮೊದಲೇ ತಯಾರು ಮಾಡಿದ್ದರೆ ಎಲ್ಲ ವಿನ್ಯಾಸಗಳನ್ನು ಕಾಣಿಸಿದ್ದೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಕಾನೂನು ಪ್ರಕಾರ ಎಲ್ಲಾ ವಿನ್ಯಾಸಗಳನ್ನು ಮಾಡಿ ಮುಂದಿನ ಕ್ರಮ ಮಾಡಬೇಕಾಗುತ್ತದೆ. ಕಂಟ್ರಿ ಟೌನ್ ಪ್ಲಾನ್ ಆಕ್ಟ್ ಪ್ರಕಾರ ಎಲ್ಲ ವಿವರಗಳನ್ನೊಳಗೊಂಡ ನೀಲಿ ನಕ್ಷೆಯನ್ನು ತಯಾರು ಮಾಡಲಾಗುತ್ತದೆ. ಸಾರ್ವಜನಿಕ ಅಭಿವೃದ್ಧಿಯ ಉದ್ದೇಶಗಳನ್ನು ಗಮನದಲ್ಲಿಟ್ಟು ವ್ಯವಸ್ಥಿತವಾದ ನಕ್ಷೆಯನ್ನು ತಯಾರು ಮಾಡಬೇಕೆಂದು ಕಾನೂನಿನಲ್ಲಿದೆ.

ಶ್ರೀ ಪಂಪಾಪತಿ.— ಕಾನೂನು ಇದೆ. ಅದನ್ನು ಅಳವಡಿಸಿಕೊಂಡು ಇವತ್ತು ಕೆಲಸ ಮಾಡುತ್ತಿದ್ದಾರೆ. ಮಾಸ್ಟರ್ ಪ್ಲಾನ್ ದೊಡ್ಡ ದೊಡ್ಡ ಪ್ಲಾನ್‌ಗಳನ್ನು ಎಲ್ಲ ಕಛೇರಿಗಳಲ್ಲೂ ಇಟ್ಟುಕೊಂಡಿರುತ್ತಾರೆ. ಹೇಳಿರತಕ್ಕ ಹಿನ್ನೆಲೆಯಲ್ಲಿ ಅವರು ಗುರುತು ಮಾಡಿರುವುದಿಲ್ಲ. ಯಾವ ಜಾಗವನ್ನು ಸ್ಕೂಲ್ ಆಟದ ಮೈದಾನ, ಮಾರ್ಕೆಟ್‌ಗಾಗಿ ವಿೂಸಲಾಗಿ ಇಡಲಾಗಿತ್ತೋ ಅಂತಹ ಜಾಗವನ್ನು ಅಧಿಕಾರಿಗಳಿಗೆ ಮನೆಗಳನ್ನು ಕಟ್ಟುವುದಕ್ಕೆ ಅನುಮತಿಯೆಂದನ್ನ ಕೊಟ್ಟಿದ್ದಾರೆ. ಇಂತಹ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂದು ತಮ್ಮನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಈಗಾಗಲೇ ಹೇಳಿದ್ದೇನೆ. ಕಂಟ್ರಿ ಟೌನ್ ಪ್ಲಾನ್ ಆಕ್ಟ್‌ಗೆ ವಿರುದ್ಧವಾಗಿ ಮಾಡಿದ್ದರೆ ಅಲ್ಲಿಂದ ವಿವರಗಳನ್ನು ತರಿಸಿಕೊಂಡು ಅವರ ಮೇಲೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇನೆಂದು ಈಗಾಗಲೇ ಹೇಳಿದ್ದೇನೆ.

ಶ್ರೀ ಪಂಪಾಪತಿ.—ಮಾನ್ಯ ಅಧ್ಯಕ್ಷರೆ.....

ಅಧ್ಯಕ್ಷರು.—ನಾನು ತಮಗೆ ಮೂರು ಉಪ-ಪ್ರಶ್ನೆಗಳನ್ನು ಹಾಕಲಿಕ್ಕೆ ಅವಕಾಶ ಕೊಟ್ಟಿದ್ದೇನೆ. ನಾಲ್ಕನೇ ಸಾರಿ ಅವಕಾಶ ಕೊಡಿ ಎಂದರೆ ಹೇಗೆ ಕೊಡುವುದು? ಉಳಿದವರಿಗೆ ಅವಕಾಶ ಕೊಡಬಾರದೆ? ದಯವಿಟ್ಟು ತಾವು ಕುಳಿತುಕೊಳ್ಳಿ, ಮಂತ್ರಿಗಳು ಸಮರ್ಪಕವಾದ ಉತ್ತರವನ್ನು ಕೊಟ್ಟಿದ್ದಾರೆ.

ಶ್ರೀ ಪಂಪಾಪತಿ.—ಮಂತ್ರಿಗಳು ಅಲ್ಲಿಂದ ವಿವರಗಳನ್ನು ತರಿಸಿಕೊಂಡು ಪರಿಶೀಲನೆ ಮಾಡುತ್ತೇನೆಂದು ಹೇಳಿದ್ದಾರೆ. ಅಲ್ಲಿಗೆ ಅಧಿಕಾರಿಗಳನ್ನು ಕಳುಹಿಸಿದರೆ ಅವರು ಎಲ್ಲವೂ ಸರಿಯಾಗಿದೆಯೆಂದು ಬರೆದುಕೊಂಡು ಬರುತ್ತಾರೆ. ನೀವು ಯಾರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರ ಪ್ರಶ್ನೆಯನ್ನು ಗಮನದಲ್ಲಿಟ್ಟು ಪೂರಕವಾಗಿ ಯಾರು ತಪ್ಪು ಮಾಡಿದ್ದಾರೆ, ಅವರಿಂದ ಮೊದಲು ಉತ್ತರ ತರಿಸಿಕೊಳ್ಳುತ್ತೇನೆ. ಅವರು ಮಾಡಿರುವಂತಹ ಕೆಲಸವನ್ನು ಪರೀಕ್ಷೆ ಮಾಡಿಸುತ್ತೇನೆ, ಯಾರು ತಪ್ಪು ಮಾಡಿರುತ್ತಾರೆ. ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸುಲಭವಾಗುತ್ತದೆ. ತಪ್ಪಿತಸ್ಥರು ಬೇಗ ಸಿಗುತ್ತಾರೆ.

ಅಧ್ಯಕ್ಷರು.—ಪ್ರಶ್ನೋತ್ತರ ವೇಳೆ ಮುಗಿದಿದೆ, ಆದರೂ ಅವಕಾಶ ಮಾಡಿಕೊಡುತ್ತೇನೆ. ಮಾನ್ಯ ಸದಸ್ಯರು ಒಂದೆರಡು ಉಪ ಪ್ರಶ್ನೆಗಳನ್ನು ಮಾತ್ರ ಕೇಳಬೇಕು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ನಿವೇಶನಗಳನ್ನು ನಿರ್ಮಾಣ ಮಾಡಿರುವ ಬಗ್ಗೆ ಭೂ-ಸ್ವಾಧೀನಪಡಿಸಿಕೊಳ್ಳುವ ಬಗ್ಗೆ.

೨೫೯. ಶ್ರೀ ಬಿ ಬಸವಲಿಂಗಪ್ಪ (ಯಲಹಂಕ).— ಮಾನ್ಯ ಸಂಸದೀಯ ವ್ಯವಹಾರ, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಬಡಾವಣೆಗಳನ್ನು ನಿರ್ಮಾಣ ಮಾಡಲು ಸ್ವಾಧೀನ ಪಡಿಸಿಕೊಂಡಿರುವ ಭೂಮಿಯ ವಿಸ್ತೀರ್ಣ ಮತ್ತು ೧೯೮೦ ರಿಂದ ೧೯೮೩ರವರೆಗೆ ಬೆಂಗಳೂರಿನ ನಾಗರೀಕರಿಗೆ ಹಂಚಿಕೆ ಮಾಡಿರುವ ಮನೆ ನಿವೇಶನಗಳೆಷ್ಟು;

ಆ) ೧೯೮೦–೧೯೮೩ರ ನಡುವೆ ಪ್ರಾರಂಭಿಕ ಅಧಿಸೂಚನೆ ಆದನಂತರ ಭೂ–ಮಾಲೀಕರಿಗೆ ರೀಕನ್ವೆ ಮಾಡಿರುವ ಭೂ–ವಿಸ್ತೀರ್ಣ ಎಂತು ಸರ್ವೆ ನಂ.ಗಳು.

ಇ) ಭೂಮಿಯನ್ನು ರೀಕನ್ವೆ ಮಾಡದೇ ಇದ್ದಲ್ಲಿ ಎಷ್ಟು ನಿವೇಶನಗಳನ್ನು ರಚನೆ ಮಾಡ ಬಹುದಾಗಿತ್ತು?

ಈ) ನಿವೇಶನ ರಹಿತ ಮತ್ತು ಮನೆ ಇಲ್ಲದ ಭೂ–ಮಾಲೀಕರು ತಮ್ಮ ಸ್ವಯಿಚ್ಛೆಯಿಂದ ಭೂ–ಸ್ವಾಧೀನ ಪಡಿಸಿದ ಭೂಮಿಯನ್ನು ರೀಕನ್ವೆಯಾಗಿ ಪರಿಗಣಿಸಲು ಇಚ್ಛಿಸಿರುತ್ತಾರೆಯೇ?

ಉ) ೧೯೮೩-೮೬ರ ವರೆಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಎಷ್ಟು ಮಂದಿಗೆ ನಿವೇಶನಗಳನ್ನು ಹಂಚಿಕೆ ಮಾಡಿದ್ದಾರೆ?

ಶ್ರೀ ಎ. ಲಕ್ಷ್ಮೀಸಾಗರ್ (ನ್ಯಾಯ ಮತ್ತು ಸಂಸದೀಯ ವ್ಯವಹಾರ, ಆಹಾರ ಮತ್ತು ನಾಗರೀಕ ಸರಬರಾಜು ಮತ್ತು ನಗರಾಭಿವೃದ್ಧಿ ಸಚಿವರು).—

ಅ)

ಎಕರೆ —— ಗುಂಟೆ	ನಿವೇಶನ ಹಂಚಿಕೆ
೧೯೮೦—೫೬೨—೦೫¾	ಇಲ್ಲ
೧೯೮೧—೫೮೮—೦೭½	೭೦೩
೧೯೮೨—೯೫೩ - ೦೬	೨೦೦೦
೧೯೮೩—೬೩೦ — ೨೦½	೧೪೦೩
೧೯೮೪—೪೪೯—೩೨	೫೯೩೬
೧೯೮೫—೮೬—೨೫೮—೨೮ (೫೧–೭–೮೫ರವರೆಗೆ)	೧೮೩೪
ಒಟ್ಟು ೩೪೭೩—೧¾	೧೧೭೭೬

ಆ) ೧೯೮೦–೮೫—೪೫೩—೫೩½ಗು (ಪೂರ್ಣ ವಿವರಗಳನ್ನು ಒಳ
೧೯೮೩–೮೬—೫೧—೨೧ಗು ಗೊಂಡ ಅಂಕಿ-ಅಂತದ ಪಟ್ಟಿ
ಒಟ್ಟು ೯೭—೧೪½ ಯನ್ನು ಲಗತ್ತಿಸಲಾಗಿದೆ.)

ಇ) ೩೦ × ೪೦ ಅಡಿ ಅಳತೆಯ ೧೪೫೦ ನಿವೇಶನಗಳು ಅಥವಾ
೪೦ × 60 ಅಡಿ ಅಳತೆಯ ೯೨೫ ನಿವೇಶನಗಳು.

ಈ) ಎಲ್ಲಿಯಾದರು ರಸ್ತೆ ನಿರ್ಮಾಣಕ್ಕೆ ಭೂಮಿ ಅವಶ್ಯಕತೆ ಇದ್ದಲ್ಲಿ ಅಂತಹ ಪರಿಸ್ಥಿತಿಯಲ್ಲಿ ಭೂ ಆರ್ಜನೆಯ ಉದ್ದೇಶವನ್ನು ಅಧಿಸೂಚನೆಯ ಮೂಲಕ ಕೈಬಿಟ್ಟು ಸಾಧ್ಯಾನುಭೂತಿಯ ಆಧಾರದ ಮೇಲೆ ರೀಕನ್ವೆಯ ಮೂಲಕ ಬದಲಿ ಭೂಮಿಯನ್ನು ಮಾಲೀಕರಿಗೆ ನೀಡುವುದು.

ಉ)

೧೯೮೩–೮೪	—	೧೪೦೩
೧೯೮೪–೮೫	—	೫೯೩೬
೧೯೮೫–೮೬	—	೧೮೩೪
ಒಟ್ಟು		೯೦೭೩

STATEMENT SHOWING THE EXTENT OF LAND RECONVEYED DURING 1980 TO 1986 AND ALSO SURVEY Nos.

Sl. No.	Name of the Village	Sy. No's	Extent A — GTS
1	Tavarekere	16/1A, 16/1B	7–16
2	Jarakabhanda Kaval	1	4–00
3	Shakabari Abudhaya Sangha	58/1, 58/B6, 60/1, 60/2, 60/3, 65/4A, 60/4B, 60/5, 71/6, 7	30–03
4	Kathriguppa	15/1, 15/2	00–18
5	Peenya	81	3–00
6	N.S. Palya	96/4, 97/1,98/2	2–00
7	Dookanahally	37/3	00–15
		34/3	00–21
		35/4	00–30
8	Akkithimmanahally	39 & 41	3–31
9	Madivala	16/1A	00–39
10	Hosakerehally	95	0–05
11	N.S. Palya	136, 139, 140	2–30
12	N.S. Palya	67, 68	1–22
13	Madivala	10	0–26
14	Madivala	98/1	3–17
15	Byrasandra	19/1, 20, 40/2, 46/3 51/2, 52/3	7–11
16	Byrasandra Vyshali lay-out	83/3	1–15
17	Dookanahalli	24/2	0–11½
18	Domlur	42/7	0–17
19	Geddalahalli	55/1	2–21
20	Geddalahalli	3/1	2–20
21	Bhoopasandra	9	0–34
22	Bhoopasandra	12	1–21
23	Bhoopasandra	13	0–02
24	Bhoopasandra	14	3–30
25	-do-	15	0–22½
26	-do-	17	0–25
27	-do-	18	0–31
28	-do-	19	4–15
29	-do-	33	2–00
		Total	97–14½

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೆ, ಮಾನ್ಯಮಂತ್ರಿಗಳು ೯ ಸಾವಿರ ಸೈಟುಗಳನ್ನು ೧೯೬೩ರಿಂದ ೧೯೬೬ರವರೆಗೆ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಅದರಲ್ಲಿ ಸಾಹುಕಾರರಿಗೆ ಅಂದರೆ 'ಎ' ಕ್ಲಾಸ್ ಜನರಿಗೆ ಎಷ್ಟು ನಿವೇಶನಗಳನ್ನು ಕೊಟ್ಟಿದ್ದೀರಿ ? ವೀಕರ್ ಸೆಕ್ಷನ್‌ನವರಿಗೆ ಎಷ್ಟು ನಿವೇಶನಗಳನ್ನು ಕೊಟ್ಟಿದ್ದೀರಿ ? ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಎಷ್ಟು ನಿವೇಶನಗಳನ್ನು ಕೊಡಲಾಗಿದೆ ಎನ್ನುವ ವಿವರಗಳನ್ನು ಹೇಳುತ್ತೀರಾ ? ರಸ್ತೆ ನಿರ್ಮಾಣಕ್ಕೆ ಅಕ್ವೈರ್ ಮಾಡಿಕೊಂಡಾಗ ಭೂಮಿಯನ್ನು ಕಳೆದುಕೊಂಡಂತಹವರಿಗೆ ರೀಕನ್ಸ್ ಮಾಡುವಾಗ ನಿವೇಶನಗಳನ್ನು ಕೊಟ್ಟಿದ್ದೇವೆಂದು ಹೇಳುತ್ತೀರಿ. ರೀಕನ್‌ವೆ ಎಷ್ಟು ಮಾಡಿದ್ದೀರಿ ? ಒಂದು ಎಕರೆ ಮಾಡಿ, ೧೦ ಆಥವಾ ೫ ಎಕರೆಯೆಂದು ಮಾಡಿದ್ದೀರಾ ಹೇಗೆ ? ಒಂದು ಎಕರೆ ರೀಕನ್‌ವೆ ಮಾಡಿಕೊಂಡು ೧ ಎಕರೆ 1½ ಎಕರೆ ಕೊಡುವುದು ಸರಿ. ೧೯೬೩ರಿಂದ ೧೯೬೬ರವರೆಗೆ ಎಷ್ಟು ಜನ ಸೈಟಿಗೋಸ್ಕರ ಅರ್ಜಿಯನ್ನು ಹಾಕಿದ್ದಾರೆ ? ಬಡವರು ಎಷ್ಟು ಜನ ಅರ್ಜಿ ಹಾಕಿದ್ದಾರೆ ? ಎಷ್ಟು ಜನರಿಗೆ ಸೈಟುಗಳನ್ನು ಕೊಟ್ಟಿದ್ದೀರಿ ? ಪ್ರಿಲಿಮಿನರಿ ನೋಟಿಫಿಕೇಷನ್ ಎಷ್ಟು ಮಾಡಿದ್ದೀರಿ ? ಫೈನಲ್ ನೋಟಿಫಿಕೇಷನ್ ಎಷ್ಟು ಮಾಡಿದ್ದೀರಿ ? ಎಷ್ಟು ರೀಕನ್‌ವೆ ಮಾಡಿದ್ದೀರಿ?

ಶ್ರೀ ಎ. ಲಕ್ಷ್ಮೀಸಾಗರ್.—ಅಲಾಟ್‌ಮೆಂಟ್ ರೂಲ್ಸ್ ಪ್ರಕಾರ ನಿವೇಶನಗಳನ್ನು ವಿತರಣೆ ಮಾಡಂತ್ತೇವೆ. ಅದರಲ್ಲಿ ಯಾವ್ಯಾವ ಗುಂಪಿನ ಜನಕ್ಕೆ ಎಷ್ಟೆಷ್ಟು ಶೇಕಡವಾರು ನಿವೇಶನಗಳನ್ನು ಕೊಡಬೇಕು ಎಂಬುದು ಅಲಾಟ್‌ಮೆಂಟ್ ರೂಲ್ಸ್‌ನಲ್ಲಿದೆ. ಅದರಲ್ಲಿ ನಿವೇಶನ ಸಿಕ್ಕಿದವರ ಸಂಖ್ಯೆ ಎಷ್ಟು ಎಂಬುದು ನನ್ನ ಹತ್ತಿರ ಪೂರಾ ಮಾಹಿತಿ ಇಲ್ಲ. ಮತ್ತೆ ರೀಕನ್ವೇ ಮಾಡಿರುವ ಬಗ್ಗೆ ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳಿದ್ದಾರೆ. ಮಾನ್ಯ ಸದಸ್ಯರು ಹೇಳಿರುವಂತಹ ವಿಷಯವನ್ನು ಜ್ಞಾಪಕದಲ್ಲಿಟ್ಟು ಕೊಂಡು ನಿಜವಾದ ಪರಿಸ್ಥಿತಿಯ ಆಧಾರದ ಮೇಲೆ ರೀಕನ್ವೇ ಮಾಡತಕ್ಕಂತಹ ಕ್ರಮವನ್ನು ಮಾಡಂತ್ತೇವೆ ಎನ್ನುವ ಮಾತನ್ನು ಹೇಳುತ್ತೇನೆ. ಎಷ್ಟು ಅರ್ಜಿಗಳು ಬಂದಿದ್ದವು ಎಂಬುದನ್ನು ಕೇಳಿದ್ದಾರೆ. ಅದರ ವಿವರ ಇಲ್ಲ. ಅಧಿಕಾರಿಗಳಿಂದ ವಿವರ ತರಿಸಿಕೊಂಡು ಹೇಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ನಿವೇಶನಗಳನ್ನು ಕೊಟ್ಟಿದ್ದೀರಲ್ಲ ಅದರಲ್ಲಿ ಸಿ.ಎ. ಸೈಟುಗಳನ್ನು ಎಷ್ಟು ಕೊಟ್ಟಿದ್ದೀರಿ ? ಸ್ಪೆಷ್ಯಲ್ ಸೈಟುಗಳನ್ನು ಎಷ್ಟು ಕೊಟ್ಟಿದ್ದೀರಿ ? ಕಾರ್ನರ್ ಸೈಟುಗಳನ್ನು ಎಷ್ಟು ಕೊಟ್ಟಿದ್ದೀರಿ ಎಂಬುದನ್ನು ಹೇಳುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಆ ವಿವರ ನನ್ನ ಹತ್ತಿರ ಈಗಿಲ್ಲ ತರಿಸಿಕೊಡುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಸದಸ್ಯರು ಯಾರು ಏನೇ ಪ್ರಶ್ನೆ ಕೇಳಿದರೂ ಅದು ಸಭೆಗೆ ಗೊತ್ತಾಗಬೇಕು. ಏನೇ ಉಪ ಪ್ರಶ್ನೆ ಕೇಳಿದರೂ ಅದು ಕೂಡ ಸಭೆಗೆ ಗೊತ್ತಾಗಬೇಕು ಆದರೆ ಮಾನ್ಯ ಮಂತ್ರಿಗಳು ಯಾರು ಏನೇ ಉಪ ಪ್ರಶ್ನೆಗಳನ್ನು ಕೇಳಿದರೂ ಅದನ್ನು ನಿಮಗೆ ಕಳುಹಿಸಿಕೊಡುತ್ತೇವೆ ಅಂತ ಹೇಳುತ್ತಾರೆ. ಇದು ಹೊಸದಾಗಿ ಸಂಪ್ರದಾಯವನ್ನು ಮಾಡುತ್ತಿದ್ದಾರೆ. ಮಾನ್ಯ ಸದಸ್ಯರು ಅತಿ ಮುಖ್ಯವಾದ ಪ್ರಶ್ನೆಯನ್ನು ಕೇಳಿದ್ದಾರೆ, ಸ್ಪೆಷ್ಯಲ್ ಸೈಟುಗಳನ್ನು ಎಷ್ಟು ಕೊಟ್ಟಿದ್ದೀರಿ ? ಕಾರ್ನರ್ ಸೈಟುಗಳನ್ನು ಎಷ್ಟು ಕೊಟ್ಟಿದ್ದೀರಿ ? ಎಂದು ಕೇಳಿದರೆ, ಅದನ್ನು ನಿಮಗೆ ಕಳುಹಿಸಿಕೊಡುತ್ತೇವೆ. ಅಂತ ಮಂತ್ರಿಗಳು ಹೇಳುತ್ತಾರೆ. ಇದು ಅವರಿಬ್ಬರಿಗೆ ಮಾತ್ರ ಸಂಬಂಧಪಟ್ಟಿದ್ದೇ ? ನಾವೆಲ್ಲ ನಾಗರೀಕರಲ್ಲವೇ ? ನಮಗೇನಾದರೂ ಸೈಟು ಬೇಕು ಅಂತ ಅನ್ನಿಸಿದಾಗ ಮಂತ್ರಿಗಳನ್ನು ಕೇಳುವುದು ಬೇಡವೇ ? ಇದು ಹೇಗೆ ಗೊತ್ತಾಗಬೇಕು ?

ಶ್ರೀ ಎ. ಲಕ್ಷ್ಮೀಸಾಗರ್.—ಸದ್ಯಕ್ಕೆ ನನ್ನಲ್ಲಿ ಆ ಮಾಹಿತಿ ಇಲ್ಲ, ನಾಳೆ ಕಳುಹಿಸಿಕೊಡುತ್ತೇನೆ ಅಂತ ಹೇಳಿದ್ದೇನೆ. ಮಾನ್ಯ ಸದಸ್ಯರು ೧೯೬೩ರಿಂದ ಈವರೆಗೆ ಎಷ್ಟು ಅರ್ಜಿಗಳು ಸೈಟಿಗಾಗಿ ಬಂದಿವೆ ಎಂಬುದಾಗಿ ಕೇಳಿದ್ದಾರೆ, ಸಿ. ಎ. ಸೈಟುಗಳನ್ನು ಎಷ್ಟು ಕೊಟ್ಟಿದ್ದೀರಿ ? ಕಾರ್ನರ್ ಸೈಟುಗಳನ್ನು ಎಷ್ಟು ಕೊಟ್ಟಿದ್ದೀರಿ ಎಂಬುದಾಗಿ ಕೇಳಿದ್ದಾರೆ ಆ ವಿವರ ನನ್ನ ಹತ್ತಿರ ಇಲ್ಲ, ತರಿಸಿಕೊಡುತ್ತೇನೆ ಅಂತ ಹೇಳಿದ್ದೇನೆ. ಅದಕ್ಕಿಂತ ಹೆಚ್ಚಿನ ಉತ್ತರವನ್ನು ಹೇಳುವುದಕ್ಕಾಗುವುದಿಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅದು ಸಭೆಗೆ ಗೊತ್ತಾಗುವುದು ಬೇಡವೆ ?